(ಗೊಂದಲ)

ಅಧ್ಯಕ್ಷರು: ಇದನ್ನು ಮುಂದಿನ ಬಾರಿ ಚರ್ಚೆಗೆ ಹಾಕೋಣ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಯಾವಾಗ ಅರ್ಧ ಗಂಟೆ ಚರ್ಚೆ ಮಾಡುವುದು?

(ಗೊಂದಲ)

ಅಧ್ಯಕ್ಷರು: ಶ್ರೀ ಈಶ್ವರ ಭೀಮಣ್ಣ ಖಂಡ್ರೆ, ಇಲ್ಲ, ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್, ಶ್ರೀ ಪಿ. ರಾಜೀವ್

(ಗೊಂದಲ)

ಸುಸ್ತಿ ಬಡ್ಡಿ ಮನ್ನಾ

450 (5984); ಶ್ರೀ ರಾಜೀವ್ ಪಿ. (ಕುಡಚಿ)

ಅ) ಸಹಕಾರ ಸಂಘಗಳಿಂದ ರೈತರು ಪಡೆಯುವ ಸಾಲಕ್ಕೆ ಎಷ್ಟು ಮೊತ್ತದವರಿಗೆ ಸರ್ಕಾರ ಬಡ್ಡಿ ರಹಿತವಾಗಿ ಸಾಲ ನೀಡುತ್ತಿದೆಯೇ:

ಆ) ರೈತರಿಗೆ ಸುಸ್ತಿ ಬಡ್ಡಿ ಮನ್ನಾ ಮಾಡುವ ಕ್ರಮದಿಂದ ಎಷ್ಟು ಬಡ ರೈತರಿಗೆ ಅನುಕೂಲವಾಗುತ್ತದೆ; (ವಿವರ ನೀಡುವುದು)

ಇ) ಬಡ ರೈತರಿಗೆ ಸರ್ಕಾರ ಅನುಕೂಲ ಮಾಡುವ ದೃಷ್ಟಿಯಿಂದ ಕನಿಷ್ಠ 5 ಎಕರೆಯವರೆಗೆ ಸಹಕಾರಿ ಸಂಘಗಳಿಂದ ಸಾಲ ಪಡೆದಿರುವ ರೈತರುಗಳ ಸಾಲವನ್ನು ಮನ್ನಾ ಮಾಡುವ ಬಗ್ಗೆ ಸರ್ಕಾರದ ನಿಲುವೇನು;

ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್ (ಸಹಕಾರ ಹಾಗೂ ಸಕ್ಕರೆ ಸಚಿವರು)

ಅ) ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ವಿತರಿಸುವ ರೂ. 3 ಲಕ್ಷಗಳವರೆಗಿನ ಅಲ್ಪಾವಧಿ ಬೆಳೆ ಸಾಲಗಳನ್ನು ಶೂನ್ಯ ಬಡ್ಡಿದರದಲ್ಲಿ ವಿತರಿಸುವ ಯೋಜನೆ ಇರುತ್ತದೆ.

ಆ) ರಾಜ್ಯದ ಸಹಕಾರ ಸಂಸ್ಥೆಗಳ ಮೂಲಕ ಸಾಲ ಪಡೆದು ದಿನಾಂಕ: 30.09.2015ಕ್ಕೆ 207197ರೈತರು ಸುಸ್ತಿದಾರರಾಗಿದ್ದು, ಒಟ್ಟು ರೂ. 536.27 ಕೋಟಿಗಳು ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸುಸ್ತಿ ಸಾಲ ಇರುತ್ತವೆ. ಈ ಸಾಲಗಳ ಅಸಲು ಮೊತ್ತವನ್ನು ದಿನಾಂಕ: 31.03.2016ರೊಳಗೆ ತೀರುವಳಿ ಮಾಡಿದಲ್ಲಿ ಅಂತಹ ರೈತರಿಗೆ ಸಾಲದ ಮೇಲಿನ ಪೂರ್ಣ ಬಡ್ಡಿ ಮನ್ನಾ ಆಗುತ್ತದೆ.

ಇ) ರಾಜ್ಯದಲ್ಲಿ ಸಹಕಾರ ಸಂಸ್ಥೆಗಳ ಮೂಲಕ 2014–15ನೇ ಸಾಲಿನಲ್ಲಿ 2105204 ರೈತರಿಗೆ ವಿತರಿಸಿರುವ ಒಟ್ಟು ಕೃಷಿ ಸಾಲ ರೂ. 9896.60 ಕೋಟಿ ಇರುತ್ತದೆ. ಈ ಮೊತ್ತದಲ್ಲಿ 5 ಎಕರೆಗಿಂತ ಕಡಿಮೆ ಜಮೀನು ಹೊಂದಿರುವ 1585536 ರೈತರಿಂದ ರೂ. 7974.50 ಕೋಟಿ ಕೃಷಿ ಸಾಲ ಇರುತ್ತದೆ. ಈ ಸಾಲಗಳನ್ನು ಮನ್ನಾ ಮಾಡುವ ಯಾವುದೇ ಪ್ರಸ್ತಾವ ಸರ್ಕಾರದ ಮುಂದೆ ಇರುವುದಿಲ್ಲ.

(ಗೊಂದಲ)

ಅಧ್ಯಕ್ಷರು: ರಾಜೀವ್‌ರವರೆ, ತಮಗೆ ಉತ್ತರ ಕಳುಹಿಸಿಕೊಡಲಾಗುವುದು.

(ಗೊಂದಲ)

ಅಧ್ಯಕ್ಷರು: ಮಾನ್ಯ ಬಿ. ಆರ್. ಪಾಟೀಲ್‌ರವರೆ, ದಿನಾಂಕ: 25.11.2015ರ 28ನೇ ಪಟ್ಟಿಯಿಂದ ವರ್ಗಾವಣೆಯಾದ ತಮ್ಮ ಪ್ರಶ್ನೆಯನ್ನು ಕೇಳಿ, ಇಲ್ಲ.

(ಗೊಂದಲ)

ಅಧ್ಯಕ್ಷರು: ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸಭೆಯ ಮುಂದೆ ಮಂಡಿಸುವುದು.

(ಗೊಂದಲ)

ಆ. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಟಿ. ಬಿ. ಜಯಚಂದ್ರ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ: 27.11.2015ರ 30ನೇ ಪಟ್ಟಿಯಲ್ಲಿನ ಲಿಖಿತ ಮೂಲಕ ಉತ್ತರಿಸುವ 229 ಪ್ರಶ್ನೆಗಳ ಪೈಕಿ 30 ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು: ಮಂಡಿಸಲಾಗಿದೆ. (ಅನುಬಂಧ–3)

(ಗೊಂದಲ)

ಅಧ್ಯಕ್ಷರು: ಈಗ ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ. ಶ್ರೀ ಹೆಚ್. ಸಿ. ಬಾಲಕೃಷ್ಣ, ಎಂ. ಟಿ. ಕೃಷ್ಣಪ್ಪ ಯಾರೂ ಇಲ್ಲ. ಇದು ಮುಂದೆ ಹೋಯಿತು.

(ಗೊಂದಲ)

ಅಧ್ಯಕ್ಷರು: ಈಗ ಗಮನ ಸೆಳೆಯುವ ಸೂಚನೆಗಳು.

ಗಮನ ಸೆಳೆಯುವ ಸೂಚನೆಗಳು

ಅಧ್ಯಕ್ಷರು: ಶ್ರೀ ಪಿ. ಆರ್. ಸುಧಾಕರಲಾಲ್ ಕೇಳಿ, ಇಲ್ಲ.

(ಗೊಂದಲ)

ಶ್ರೀ ಭೀಮಾನಾಯಕ್ ಎಲ್‌ಬಿಪಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸುಧಾಕರ್‌ಲಾಲ್‌ರವರು ಇದ್ದಾರೆ.

(ಗೊಂದಲ)